


ಸುರಪುರದಲ್ಲಿ ಒಬ್ಬ ಮುದುಕಿ ಇದ್ದಳು. ಅವಳು ಕರಿಯ ಮತ್ತು ಬಿಳಿಯ ಬಣ್ಣದ ಎರಡು ಬೆಕ್ಕು ಸಾಕಿದ್ದಳು. ಅವೆರಡು ಬಹಳ ಪ್ರೀತಿಯಿಂದ ಇದ್ದವು. ಮುದುಕಿ ಬೆಕ್ಕುಗಳಿಗೆ ಕುಡಿಯಲು ಹಾಲು ಹಾಕುತ್ತಿದ್ದಳು. ಅವು ಮನೆಯಲ್ಲಿ ಇಲಿಗಳಾಗದಂತೆ ನೋಡಿಕೊಂಡವು. ಒಮ್ಮೆ ಅವಕ್ಕೆ ಬೆಣ್ಣೆ ತಿನ್ನುವ ಆಸೆಯಾಯಿತು. ಮುದುಕಿ ಹಾಲು ಮಾರುತ್ತಿದ್ದಳು. ಬೆಣ್ಣೆ ತೆಗೆಯುತ್ತಿರಲಿಲ್ಲ. ಅದಕ್ಕಾಗಿ ಅವು ಬೇರೆಯವರ ಮನೆಯ ಬೆಣ್ಣೆ ಕದ್ದವು. ಅದನ್ನು ಪಾಲು ಮಾಡಿಕೊಂಡು ತಿನ್ನಲೆಂದು ಊರ ಹೊರಗಿನ ಮರದ ನೆರಳಿಗೆ ಬಂದವು.

ಆಗ ಬಿಳಿಯ ಬೆಕ್ಕು, 'ನಾನು ಮನೆಯ ಹೊರಗೆ ಕಾವಲುಗಾರನಾಗಿದ್ದೆ. ನನ್ನಿಂದ ನಿನಗೆ ಬೆಣ್ಣೆ ತರಲು ಸಾಧ್ಯವಾಯಿತು. ನಾನು ಮನೆಯ ಜನರು ಬರುವ ಸುಳಿವು ನೀಡುತ್ತ ನಿನ್ನನ್ನು ರಕ್ಷಿಸಿದ್ದೇನೆ. ಅದಕ್ಕಾಗಿ ನನಗೆ ಹೆಚ್ಚು ಬೆಣ್ಣೆ ಬೇಕು' ಎಂದಿತು.

ಕರಿಯ ಬೆಕ್ಕು, ಬಿಳಿಯ ಬೆಕ್ಕಿನ ಮಾತನ್ನು ಒಪ್ಪಲಿಲ್ಲ. ಅದರ ಮೇಲೆ ಕೋಪಗೊಂಡಿತು. 'ನೀನು ಮನೆಯ ಕಾವಲು ಮಾಡುವುದು ಮುಖ್ಯವಲ್ಲ. ನಾನು ಮನೆಯವರ ಹೆದರಿಕೆಯಿಂದ ಬೆಣ್ಣೆ ಗಡಿಗೆಯನ್ನು ತರದಿದ್ದರೆ ನೀನು ಏನು ಮಾಡುತ್ತಿದ್ದೆ? ನಾನು ಧೈರ್ಯದಿಂದ ಮನೆಯೊಳಗೆ ಹೋಗಿ ಬೆಣ್ಣೆಯ ಗಡಿಗೆ ತಂದಿರುವೆ. ನನ್ನ ಕೆಲಸ ಹೆಚ್ಚಿನದು. ನಿನಗಿಂತ ನನಗೆ ಹೆಚ್ಚು ಬೆಣ್ಣೆ ಬೇಕು' ಎಂದು ಜಗಳ ತೆಗೆಯಿತು.

ಬೆಕ್ಕುಗಳ ಜಗಳವನ್ನು ಮರದ ಮೇಲಿನ ಮಂಗ ಕೇಳಿಸಿಕೊಂಡಿತು. ಅವೆರಡರ ಜಗಳದ ಲಾಭ ಪಡೆಯಲು ಮಂಗ ಮರದಿಂದ ಕೆಳಗೆ ಇಳಿದು ಬಂದಿತು. 'ನೀವು ಜಗಳ ಮಾಡಬೇಡಿರಿ. ನಿಮಗೆ ಸರಿಯಾಗಿ ಪಾಲು ಮಾಡಿಕೊಡುವೆ. ನೀವು ತಕ್ಕಡಿಯನ್ನು ತನ್ನಿರಿ' ಎಂದು ಮಂಗ ಅವಕ್ಕೆ ಹೇಳಿತು.

ಹಿಂದೆ ಮುದಿ ಮಂಗವೊಂದು ಈ ಬೆಕ್ಕುಗಳ ಹಿರಿಯರಿಗೆ ಬೆಣ್ಣೆಯನ್ನು ಪಾಲು ಮಾಡುವ ನೆಪದಲ್ಲಿ ಎಲ್ಲ ಬೆಣ್ಣೆ ತಿಂದು ಮೋಸ ಮಾಡಿದ ಸಂಗತಿಯ ಬಗ್ಗೆ ತಾಯಿ ಹೇಳಿದ ಮಾತನ್ನು ಅವು ನೆನಪಿಸಿಕೊಂಡವು. 'ಮಂಗನಿಗೆ ಪಾಲು ಮಾಡಿಕೊಡಲು ಅವಕಾಶ ನೀಡುವುದೇ ಬೇಡ. ಜಗಳವಾಡದೆ ನಾವೇ ಹಂಚಿಕೊಳ್ಳೋಣ' ಎಂದು ಸಂಜ್ಞೆಯ ಮೂಲಕ ಅವು ನಿರ್ಧರಿಸಿದವು.

ಕರಿಯ ಬೆಕ್ಕು– 'ಈಗ ತಕ್ಕಡಿ ತರುವುದು ಬೇಡ. ನಾನೊಂದು ಲೆಕ್ಕವನ್ನು ನಿನಗೆ ಹೇಳುತ್ತೇನೆ. ನೀನು ಲೆಕ್ಕ ಮಾಡಿದರೆ ನಿನಗೊಂದು ಪಾಲು ಕೊಡುತ್ತೇವೆ' ಎಂದಿತು. ಬಿಳಿಯ ಬೆಕ್ಕು ಸಹ ಒಪ್ಪಿಕೊಂಡಿತು.

'ಬೆಕ್ಕಣ್ಣ! ಯಾವ ಲೆಕ್ಕ ಹೇಳು' ಎಂದಿತು. ಕರಿಯಬೆಕ್ಕು ಲೆಕ್ಕ ಹೇಳತೊಡಗಿತು.

'ಅಣ್ಣನಲ್ಲಿ ಒಂಬತ್ತು ಚಪಾತಿ, ತಮ್ಮನಲ್ಲಿ ಆರು ಚಪಾತಿ ಇವೆ. ಅವರು ಚಪಾತಿ ತಿನ್ನಬೇಕೆನ್ನುವಷ್ಟರಲ್ಲಿ ಒಬ್ಬ ಆಗಂತುಕನು ಬಂದನು. 'ನನಗೆ ಹಸಿವೆಯಾಗಿದೆ. ತಿನ್ನಲು ಏನಾದರೂ ಕೊಡಿರಿ' ಎಂದನು. ಅವರು ಚಪಾತಿ ಕೊಡಲು ಒಪ್ಪಿಕೊಂಡರು. ಆಗಂತುಕನು